# ಮಾರ್ಕೆತ ಟೆನ್ನಿಸ್‌ನ ಹೊಸ ಮಿಂಚು


ಕಪ್‌ಗೆ ಸಿಹಿಮುತ್ತು

**ಹೋದ ವರ್ಷ ಬ್ಯಾಂಡೇಜ್ ಸುತ್ತಿಕೊಂಡು ಇನ್‌ಸ್ಟಾಗ್ರಾಂನಲ್ಲಿ ದುಃಖ ತೋಡಿಕೊಂಡಿದ್ದ ಮಾರ್ಕೆತ ವಿಂಬಲ್ಡನ್‌ನಲ್ಲಿ ಇತಿಹಾಸ ಬರೆದರು. ಇದುವರೆಗೆ ಶ್ರೇಯಾಂಕರಹಿತ ಆಟಗಾರ್ತಿಯಾಗಿ ಯಾರೂ ಎತ್ತಿಹಿಡಿಯದೇ ಇದ್ದ ಕಪ್ ಅವರ ಕೈ ಸೇರಿತು. ಅದರ ಹಿಂದಿನ ಅವರ ಹೆಜ್ಜೆಗುರುತು ಕಣ್ಣರಳಿಸುವಂತಿದೆ.**

**ವಿಶಾಖ ಎನ್.**

ಹೆಸರು: ಮಾರ್ಕೆತ ವೊಂದ್ರೊಸೋವಾ. ವಯಸ್ಸು: 24. ಗಂಡನ ಹೆಸರು: ಸ್ಟೆಪನ್ ಸ್ಸೈಮಕ್. ಸಾಕುಪ್ರಾಣಿ: ಬೆಕ್ಕು, ಅದರ ಹೆಸರು ಫ್ರಾಂಕಿ. ಹವ್ಯಾಸ: ಟ್ಯಾಟೂ ಮೋಹ.

ವಿಂಬಲ್ಡನ್ ಟೆನಿಸ್‌ನಲ್ಲಿ ಈ ಸಲ ಚಾಂಪಿಯನ್ ಆದ ಮಾರ್ಕೆತ ತಮ್ಮ ಹೈವೋಲ್ಟೇಜ್ ನಗುವಿಗೆ ಫೇಮಸ್ಸು. ಡ್ರಾಪ್ ಶಾಟ್‌ಗಳಿಂದ ಎದುರಾಳಿ ಆಟಗಾರ್ತಿಗೆ ಸವಾಲೊಡ್ಡುವುದು ಚಾಳಿ. ಎರಡು ಶಸ್ತ್ರಚಿಕಿತ್ಸೆಯ ನಂತರವೂ ಸೆಂಟರ್ ಕೋರ್ಟ್‌ನಲ್ಲಿ ಚಾಂಪಿಯನ್ ಆಗಿರುವುದಕ್ಕೆ ಚಪ್ಪಾಳೆ. ಯಾವ ಶ್ರೇಯಾಂಕರಹಿತ ಆಟಗಾರ್ತಿಯೂ ಇದುವರೆಗೆ ಚಾಂಪಿಯನ್ ರುಜು ಹಾಕಿರಲಿಲ್ಲವೆನ್ನುವ ಅಗ್ಗಳಿಕೆಗೆ ಶಹಬ್ಬಾಸ್. 2019ರಲ್ಲಿ ಮಾರ್ಕೆತ ಫ್ರೆಂಚ್ ಓಪನ್ ಟೆನಿಸ್‌ನಲ್ಲಿ ಫೈನಲ್ ಪ್ರವೇಶಿಸಿದ ನೆನಪಿನ್ನೂ ಹಸಿರು. ಆ್ಯಷ್ ಬಾರ್ಟಿ ಎದುರು ಆಗ ಸೋಲುಂಡು, ರನ್ನರ್ ಅಪ್ ಆಗಿದ್ದಷ್ಟೇ ಈ ಹುಡುಗಿಯ ಸಾಧನೆ; ಇನ್ನುಮುಂದೆ ಕಷ್ಟ ಎಂದು ಟೆನಿಸ್ ಪಂಡಿತರು ಹೇಳಲು ಈಕೆ ಎರಡು ಸಲ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದೇ ಕಾರಣವಾಗಿತ್ತು. ಅದನ್ನೀಗ ಮಾರ್ಕೆತ ಮೀರಿ ಮಿಂಚಿದ್ದಾರೆ.

ಚೆಕ್ ಗಣರಾಜ್ಯದ ಹುಡುಗಿ ಈ ಮಾರ್ಕೆತ. ಅವರದ್ದು ಕ್ರೀಡಾಮೋಹಿಗಳ ಕುಟುಂಬ. ತಾತ– ಅಮ್ಮನ ತಂದೆ– ಫ್ರಾಂಟಿಸೆಕ್ ರಾಷ್ಟ್ರೀಯ ಪೆಂಟಥ್ಲಾನ್ ಚಾಂಪಿಯನ್ ಆಗಿದ್ದವರು. ಅಮ್ಮ ಜಿಂಡ್ರಿಸ್ಕಾ ವೃತ್ತಿಪರ ವಾಲಿಬಾಲ್ ಆಟಗಾರ್ತಿ. ಟೆನಿಸ್ ಆಟಕ್ಕೆ ಮೊದಲು ಮಗಳನ್ನು ಹಚ್ಚಿದ್ದು ಅಪ್ಪ ಡೇವಿಡ್. ನಾಲ್ಕು ವರ್ಷದ ಮಗಳ ಕೈಗೆ ರ್‍ಯಾಕೆಟ್ ಕೊಟ್ಟಿದ್ದು ವಿಶೇಷವೇ. ಜೂನಿಯರ್ ಹಂತದ ಟೆನಿಸ್‌ನಲ್ಲಿ ವಿಶ್ವದ ಮೊದಲ ರ್‍ಯಾಂಕಿಂಗ್‌ಗೆ ಏರಲು ಹುಡುಗಿ ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಫ್ರೆಂಚ್ ಓಪನ್ ಫೈನಲ್‌ನಲ್ಲಿ ಆಡಿದಾಗಲೂ ವಯಸ್ಸಿನ್ನೂ ಹತ್ತೊಂಬತ್ತು.

ಮಾರ್ಕೆತ ಮೂರರ ಮಗುವಾಗಿದ್ದಾಗಲೇ ಅಪ್ಪ, ಅಮ್ಮ ವಿವಾಹ ವಿಚ್ಛೇದನ ಪಡೆದರು. ಆದರೆ, ಇಬ್ಬರೂ ಮಗಳ ಟೆನಿಸ್ ಪ್ರೀತಿಗೆ ನೆರಳಾಗಿ ನಿಂತರು. ಸ್ಕೈಯಿಂಗ್, ಫುಟ್‌ಬಾಲ್, ಟೇಬಲ್ ಟೆನಿಸ್, ಫ್ಲೋರ್‌ಬಾಲ್, ಟೆನಿಸ್... ಹೀಗೆ ಹಲವು ಆಟಗಳಲ್ಲಿ ಪ್ರೌಢಾವಸ್ಥೆಯಲ್ಲಿದ್ದಾಗ ಕೈಯಾಡಿಸಿದಳು. ಎಲ್ಲದರಲ್ಲೂ ಅವಳದ್ದು ಗೆಲುವಿನ ನಗು. 2006ರಲ್ಲಿ, ಪುಟಾಣಿ ವಯಸ್ಸಿನಲ್ಲಿಯೇ ಅವಳು ರಾಷ್ಟ್ರೀಯ ಮಿನಿ ಟೆನಿಸ್ ಟೂರ್ನಿಯಲ್ಲಿ ಆಡಿದಳು. ಅಲ್ಲಿ ಮೂರನೇ ಸ್ಥಾನ ಪಡೆದು, ಕ್ರೊಯೇಷಿಯಾದಲ್ಲಿ ನಡೆಯಲು ನಿಗದಿಯಾಗಿದ್ದ ಅಂತರರಾಷ್ಟ್ರೀಯ ಟೂರ್ನಿಗೆ ಅರ್ಹತೆ ಪಡೆದುಕೊಂಡಳು. ಅಲ್ಲಿ ಮೊದಲ ಸುತ್ತಿನಲ್ಲೇ ಸೋತಳು. ಆಗ ಆಡಿದ ಎಲ್ಲ ಮಕ್ಕಳಿಗೂ ಒಂಬತ್ತು ದಾಟಿದ್ದರೆ, ಇವಳಿನ್ನೂ ಎಂಟರ ಹುಡುಗಿ. ಇನ್ನಷ್ಟು ತರಬೇತಿಗೆ ಬಾಗಿಲು ತೆರೆದದ್ದೇ ಚಿಕ್ಕ ಪ್ರಾಯದಲ್ಲೂ ಇವಳು ತೋರಿದ ದಿಟ್ಟತನ ಕಂಡು.

ಆಸ್ಟ್ರೇಲಿಯಾ ಓಪನ್‌ನಲ್ಲಿ ಟ್ಯುನಿಷಿಯಾದ ಒನ್ಸ್ ಜಬೇರ್ ಅವರನ್ನು ಎರಡನೇ ಸುತ್ತಿನಲ್ಲಿ ಮಾರ್ಕೆತ ಸೋಲಿಸಿದ್ದ ನೆನಪಿತ್ತು. ಇಬ್ಬರೂ ವಿಂಬಲ್ಡನ್ ಫೈನಲ್‌ನಲ್ಲಿ ಮುಖಾಮುಖಿಯಾದಾಗ ಟೆನಿಸ್ ಅಭಿಮಾನಿಗಳಿಗೆಲ್ಲ ಅದೇ ನೆನಕೆ. ಹೇಳಿಕೇಳಿ,



ಕಳೆದ ವರ್ಷ ಹಾಕಿದ್ದ ಇನ್‌ಸ್ಟಾಗ್ರಾಂ ಫೋಟೊ

ಮಾರ್ಕೆತ ಎಡಗೈ ಆಟಗಾರ್ತಿ. ಕಳೆದ ವರ್ಷ ಅವರು ಅದೇ ಮುಂಗೈನಲ್ಲಿ ನೋವು ಅನುಭವಿಸಿದ್ದು. ಹಲವು ವೈದ್ಯರನ್ನು ಭೇಟಿ ಮಾಡಿದರೂ ಸಮಸ್ಯೆಗೆ ಪರಿಹಾರ ಸಿಗಲಿಲ್ಲ. ಶಸ್ತ್ರಚಿಕಿತ್ಸೆ ಅನಿವಾರ್ಯ ಎಂದು ಒಮ್ಮೆ ಇನ್‌ಸ್ಟಾದಲ್ಲಿ ಪೋಸ್ಟ್ ಮಾಡಿದ್ದರು.

ವಿಂಬಲ್ಡನ್‌ನಲ್ಲಿ ಆಡಲು ಇಳಿದಾಗ ಮಾರ್ಕೆತಾಗೆ ಕಳೆದುಕೊಳ್ಳುವುದು ಏನೂ ಇರಲಿಲ್ಲ. ಇಡೀ ಗ್ರ್ಯಾನ್ ಸ್ಲ್ಯಾಮ್‌ನಲ್ಲಿ ಅವರು ಸೋತಿದ್ದು ಎರಡು ಸೆಟ್‌ಗಳನ್ನು ಮಾತ್ರ; ನಾಲ್ಕನೇ ಸುತ್ತಿನಲ್ಲಿ ಒಮ್ಮೆ, ಕ್ವಾರ್ಟರ್‌ಫೈನಲ್‌ನಲ್ಲಿ ಇನ್ನೊಮ್ಮೆ. ಅದು ಬಿಟ್ಟರೆ ಬೇಸ್‌ಲೈನ್‌ಗೆ ಅಂಟಿಕೊಂಡು ಆಡುವುದರಲ್ಲಾಗಲೀ, ಚಾಕಚಕ್ಯತೆಯಿಂದ ಡ್ರಾಪ್ ಶಾಟ್ ಹಾಕುವುದರಲ್ಲಾಗಲೀ ಅವರ ಆಟ ರಸದೌತಣ. ಬ್ರೇಕ್ ಪಾಯಿಂಟ್‌ಗಳನ್ನು ಹಣ್ಣಾಗಿಸಿಕೊಳ್ಳುವಲ್ಲಿ ಅವರು ಪಡೆದ ಯಶಸ್ಸೇ ಮನೋಬಲ ಎಷ್ಟು ಗಟ್ಟಿಯಾಗಿದೆ ಎನ್ನುವುದಕ್ಕೆ ಸಾಕ್ಷ್ಯ. ಏಳರಲ್ಲಿ ಆರು ಬ್ರೇಕ್ ಪಾಯಿಂಟ್ ಅವಕಾಶಗಳನ್ನು ಅವರು ವಿಂಬಲ್ಡನ್ ಫೈನಲ್‌ನಲ್ಲಿ ಹಣ್ಣಾಗಿಸಿಕೊಂಡರು. ಎದುರಾಳಿ ಜಬೇರ್ ಹತ್ತರಲ್ಲಿ ನಾಲ್ಕನ್ನು ಮಾತ್ರ ಪಾಯಿಂಟ್ ಆಗಿ ಪರಿವರ್ತಿಸಿಕೊಂಡದ್ದು.

ತಮ್ಮ ಕೋಚ್ ಜಾನ್ ಮೆರ್ಟ್ಲ್ ಹಾಗೂ ತಾವು ಇಬ್ಬರೂ ಸ್ಟ್ರಾಬೆರಿ ಟ್ಯಾಟೂ ಹಾಕಿಸಿಕೊಂಡು ವಿಂಬಲ್ಡನ್ ಗೆಲುವನ್ನು ಸಂಭ್ರಮಿಸಬೇಕೆನ್ನುವುದು ಮಾರ್ಕೆತ ಸದ್ಯದ ಬಯಕೆ. ಕೋಚ್ ಆಟದ ಶೈಲಿಯನ್ನೇ ತನ್ನದಾಗಿಸಿಕೊಂಡಿರುವ ಹುಡುಗಿಗೆ ಈಗ ಹೋದ ವರ್ಷ ಇದ್ದ ಕೈನೋವೂ ಮರೆತುಹೋಗಿದೆ. 42ನೇ ರ್‍ಯಾಂಕ್ ಆಟಗಾರ್ತಿ ಆಗಿ ಆಡಲು ಇಳಿದಿದ್ದ ಅವರು ಟೂರ್ನಿ ಮುಗಿದ ಮೇಲೆ 10ನೇ ರ್‍ಯಾಂಕ್‌ಗೆ ಜಿಗಿದಿದ್ದಾರೆ. ಟೆನಿಸ್ ಆಟವನ್ನು ಅಷ್ಟಕ್ಕಷ್ಟೇ ಎನ್ನುವಂತೆ ನೋಡುವ ಚೆಕ್ ಗಣರಾಜ್ಯದಲ್ಲಿ ಈಗ ಮಾರ್ಕೆತ ಆತ್ಮವಿಶ್ವಾಸದ ನಗುವಿಗೆ ಅರ್ಥವಿದೆ.

ಪ್ರತಿಕ್ರಿಯಿಸಿ: feedback@sudha.co.in